SC:111/2021
PW:45 CW:62

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 111/2021

| | |
|---|---|
| PW | 45 |
| CW | 62 |

**ಸಾಕ್ಷಿದಾರರು ನ್ಯಾಯಾಲಯದ ಮುಂದೆ ವಿ.ಸಿ ಮೂಲಕ ಹಾಜರಾಗಿದ್ದು ಅವರಿಗೆ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 17.10.2025.

| | | |
|---|---|---|
| ಸಾಕ್ಷಿಯ ಹೆಸರು | : | ರಾಮ್‌ಜಿ ಎ. ಎಸ್ |
| ತಂದೆಯ ಹೆಸರು | : | ಗಣಪತಿರಾವ್ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ರಾಜಮಂಡ್ರಿ ಶಾಖೆ, ಆಂಧ್ರಪ್ರದೇಶ್ |
| ವಾಸಸ್ಥಳ | : | ರಾಜಮಂಡ್ರಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2020 ರಿಂದ 2022 ನೇ ಸಾಲಿನಲ್ಲಿ ನಾಮಗೊಂಡ್ಲು ಶಾಖೆ, ಕೆನರಾ ಬ್ಯಾಂಕ್ ನಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೆನು.

2. ನಮ್ಮ ಶಾಖೆಯಲ್ಲಿದ್ದ ಎನ್ ವಿಶ್ವನಾಥ್ ಇವರಿಗೆ ಸಂಬಂಧಿಸಿದ ಖಾತೆಯ KYC ದಾಖಲೆ ಹಾಗೂ statement ಅನ್ನು ದಿ.04.07.2021 ರಿಂದ 06.07.2021 ರ ಅವಧಿಯ statement extract ಕೊಡುವಂತೆ ಪೊಲೀಸರು ನಮಗೆ ಮನವಿ ಸಲ್ಲಿಸಿದ್ದರು. ಅದರಂತೆ ನಾವು ಪೊಲೀಸರಿಗೆ

statement ಹಾಗೂ ಖಾತೆದಾರರ ಆಧಾರ್ ಕಾರ್ಡ್ ಹಾಗೂ ಪ್ಯಾನ್ ಕಾರ್ಡ್ ನಕಲನ್ನು ಒದಗಿಸಿರುತ್ತೇವೆ. ಸಾಕ್ಷಿದಾರರು ಪೊಲೀಸರು ತನಗೆ ನೀಡಿದ ಮನವಿ ಪತ್ರ ಹಾಗೂ ತಾನು ನೀಡಿದ statement ದಾಖಲೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 62, ಸಾಕ್ಷಿದಾರರ ಸಹಿಗಳನ್ನು ನಿಪಿ 62(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿತರ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದಃ</u>**

3. ಖಾತೆದಾರರ ಕುಟುಂಬದ ಸದಸ್ಯರು ಮನವಿ ಸಲ್ಲಿಸಿದ್ದಲ್ಲಿ ಮಾತ್ರ ಖಾತಾ extract ಕೊಡಲು ಅವಕಾಶ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೊಲೀಸರು ಅದರ ಬಗ್ಗೆ ಮನವಿ ಸಲ್ಲಿಸಿದ್ದಲ್ಲಿ ನಾವು ಖಾತಾ extract ಕೊಡಬಹುದು ಎಂದು ನುಡಿದಿರುತ್ತಾರೆ. ಪೊಲೀಸರ ಒತ್ತಾಸೆ ಮೇರೆಗೆ ನಾನು ನಿಪಿ 62 ರಂತೆ ಸುಳ್ಳು ದಾಖಲೆ ಒದಗಿಸಿರುತ್ತೇನೆ ಎಂದರೆ ಸರಿಯಲ್ಲ.

1 ಮತ್ತು 3 ನೇ ಆರೋಪಿತರ ವಕೀಲರನ್ನು ಕೂಗಿಸಿದ್ದು, ಗೈರು ಹಾಜರಿದ್ದು 3 ನೇ ಆರೋಪಿ ನ್ಯಾಯಾಲಯದ ಮುಂದೆ ಶ್ರೀ ಕೆ.ಎಸ್.ಎನ್ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿದ್ದು, 1 ನೇ ಆರೋಪಿ ಪರ ವಕೀಲರು ಯಾರೂ ಹಾಜರಾಗದೇ ಇದ್ದ ಕಾರಣ ಆತನ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 17.10.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**(ಎಸ್. ಶ್ರೀಧರ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.